# ಅಧ್ಯಾಯ -5

# ಡಾ|| ಇರಾವತಿ ಕರ್ವೆ

A. ಜೀವನ ಮತ್ತು ಸಾಧನೆ

B. ಭಾರತದಲ್ಲಿ ರಕ್ತ ಸಂಬಂಧ/ಬಂಧುತ್ವದ, ಅಧ್ಯಯನ

C. ಗ್ರಾಮೀಣ ಸಮುದಾಯ

## A) ಜೀವನ ಮತ್ತು ಸಾಧನೆ

ಡಾ|| ಇರಾವತಿ ಕರ್ವೆಯವರು ಭಾರತದ ಪ್ರಪ್ರಥಮ ಮಹಿಳಾ ಸಮಾಜ ಶಾಸ್ತ್ರಜ್ಞರೆಂದು ಪ್ರಸಿದ್ಧರಾಗಿದ್ದಾರೆ. ಇವರು ಬಾಲ್ಯದಿಂದಲೂ ಪ್ರತಿಭಾನ್ವಿತ ವಿದ್ಯಾರ್ಥಿ, ಉತ್ತಮ ಸಮಾಜ ಶಾಸ್ತ್ರಜ್ಞರೆಂದು ಸಮಾಜಶಾಸ್ತ್ರದ ಸಾಹಿತ್ಯದಲ್ಲಿ ಗುರುತಿಸಿಕೊಂಡಿದ್ದಾರೆ.

ಮಹಾರಾಷ್ಟ್ರದ ರಾಜಧಾನಿಯಾದ ಮುಂಬಾಯಿ ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಮುಗಿಸಿದ್ದಾರೆ. ನಂತರ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಸಮಾಜಶಾಸ್ತ್ರದ ಸಂಶೋಧನಾ ಕೇಂದ್ರದಲ್ಲಿ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಮಾನವಶಾಸ್ತ್ರ ವಿಷಯದಲ್ಲಿ ಕೂಡಾ ವಿಶೇಷ ಆಸ್ಥೆಯುಳ್ಳವರಾಗಿದ್ದರು. ಇವರ ಕೊಡುಗೆಗಳು ಸಮಾಜಶಾಸ್ತ್ರದಷ್ಟು ಮಾನವಶಾಸ್ತ್ರದಲ್ಲಿ ಕೂಡಾ ಇದೆ. ಇವರ ವಿಶೇಷ ಆಸಕ್ತಿಯ ಅಧ್ಯಯನ ಕ್ಷೇತ್ರಗಳೆಂದರೆ ಬಂಧುತ್ವ, ಸಾಮಾಜಿಕ ಸಂಸ್ಥೆಗಳು ಮತ್ತು ಭಾರತೀಯ ಸಮಾಜಗಳಾಗಿವೆ.

ಡಾ|| ಇರಾವತಿ ಕರ್ವೆಯವರ ಜನನ ಬರ್ಮನದಲ್ಲಿ ಆಗಿತ್ತು. ಆ ಸಂದರ್ಭದಲ್ಲಿ ಅವರ ತಂದೆ ಬರ್ಮಾ ದೇಶದಲ್ಲಿದ್ದರು. ಬರ್ಮಾದ ಸುಪ್ರಸಿದ್ಧ ನದಿಯ ಹೆಸರು ಇರಾವತಿ ಎಂದಿತ್ತು ಹೀಗಾಗಿ ಅವರ ಹೆಸರನ್ನು ಇರಾವತಿಯೆಂದು ನಾಮಕರಣ ಮಾಡಿದರು.

ಇರಾವತಿಯವರು ph.d ಯನ್ನು ಮಾನವಶಾಸ್ತ್ರ ವಿಷಯದಲ್ಲಿ ಬರ್ಲಿನನ ಪ್ರಸಿದ್ಧ ವಿಶ್ವವಿದ್ಯಾಲಯದಲ್ಲಿ ಅಧ್ಯಯನಿಸಿದರು. ಅವರ ಯಜಮಾನರು ಪೂನಾದ ಪ್ರಸಿದ್ಧ ಫರ್ಗುಸನ ಕಾಲೇಜಿನ ಪ್ರಾಚಾರ್ಯರಾಗಿದ್ದರು. 1939ರಿಂದ ಇರಾವತಿಯವರು ತಮ್ಮ ನಿವೃತ್ತಿಯವರೆಗೆ ಪೂನಾದ ಡೆಕ್ಕನ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸಿದರು.

ಇರಾವತಿಯವರ ಮಾತೃಭಾಷೆ ಮರಾಠಿಯಾಗಿತ್ತು. ಹೀಗಾಗಿ ಮರಾಠಿಯ ಭಾಷಾ ಪ್ರಭುತ್ವದ ಫಲವಾಗಿ ಅವರು ಬರೆದ 'ಯುಗಾಂತ' ಎನ್ನುವ ಪುಸ್ತಕಕ್ಕೆ ಸಾಹಿತ್ಯ ಅಕಾಡೆಮಿ



Scanned with Ca

ಪ್ರಶಸ್ತಿ ಲಭಿಸಿರುವದು, ಆರಂಭದಿಂದಲೂ ಚಿಂತನಾಶೀಲರು ಪ್ರತಿಯೊಂದು ವಿಷಯವನ್ನು ಗಂಭೀರವಾಗಿ ಆಲೋಚಿಸಿ ಒಳಹೊರಗೂ ಅದನ್ನು ಬಲ್ಲವರಾಗಿದ್ದರು.

ಡಾ|| ಇರಾವತಿ ಕರ್ವೆಯವರು ಸಂಪ್ರದಾಯಗಳಿಗೆ ಒಲವನ್ನು ತೋರಿಸಿದ ಒಂದು ತರಹ ಎಡಪಂಥೀಯ ನಿಲುವಿನವರಾಗಿದ್ದರು. ನಿರಂತರವಾಗಿ ಜೀವನದ ಕೊನೆಯ ಉಸಿರು ಇರುವವರೆಗೆ ಅಧ್ಯಯನ, ಅಧ್ಯಾಪನ ಹಾಗೂ ಸಂಶೋಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಇವರಿಗೆ ಸಂಸ್ಕೃತ ಭಾಷೆಯು ಚೆನ್ನಾಗಿ ತಿಳಿದಿತ್ತು, ಅದರಿಂದಾಗಿ ಭಾರತೀಯ ಸಂಸ್ಕೃತಿಯ ಅಧ್ಯಯನ ತುಂಬಾ ಸರಳವಾಯಿತು. ಭೌತಿಕ ಮತ್ತು ಮಾನವ ಶಾಸ್ತ್ರವನ್ನು ಚೆನ್ನಾಗಿ ಕರಗತಮಾಡಿಕೊಂಡಿದ್ದರು. ಇವರು ಸ್ನಾತಕೋತ್ತರ ಹಂತದಲ್ಲಿರುವ ಗತಿ ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣ ಜಾತಿಯ ಬಗ್ಗೆ ಸಂಶೋಧನೆ ಮಾಡಲು ಕ್ಷೇತ್ರಾಧ್ಯಯನದಲ್ಲಿ ತೊಡಗಿದ್ದರು. ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡುಬರುವ ಎಲ್ಲ ವಿಷಯಗಳನ್ನು (ಸಂಸ್ಥೆಗಳು) ವೈಜ್ಞಾನಿಕ ಹಾಗೂ ವೈಚಾರಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದರು. ಇವರ ಭಾಷಾಪ್ರಭುತ್ವ, ವಿದ್ವತ್‌ಪೂರ್ಣ ಲೇಖನಗಳು, ಸಂಶೋಧನೆಯ ಆಸಕ್ತಿ. ವಸ್ತುನಿಷ್ಠತೆ ಮತ್ತು ಪ್ರಶ್ನಿಸುವ ಮನೋಭಾವ ಇತ್ಯಾದಿಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ.

**ಅವರ ಕೃತಿಗಳು:**

1. Kinship Organisation in India
2. Hindu Society-an Interpreation
3. Family in India
4. Land and People of Maharastra
5. Kinship Terminology and Kinship usages in Rigveda and Atharvana Veda
6. Kinship terms in Mahabharata - Deccan College Gulletin
7. Family through six generations
8. What is caste? Caste as extended Kin
9. M.B. Culture
10. ಯುಗಾಂತಾ
11. ಅಣ ಚ ಸಂಸ್ಕೃತಿ
12. Puripurti
13. ಭೋವ್ರಾ - Bhowra
14. ಮರಾಠಿ ಲೋಕಂಚ ಸಂಸ್ಕೃತಿ
15. ವತಚಲ- Watched



Scanned with Ca

## B) ಭಾರತದಲ್ಲಿ ಭಾಂದವ್ಯದ ಸಂಘಟನೆ
## Kinship Organisation in India

ಬಂಧುತ್ವ ವ್ಯವಸ್ಥೆ ಮೂಲಭೂತ ಸಾಮಾಜಿಕ ಸಂಸ್ಥೆಯನ್ನು ಪ್ರತಿನಿಧಿಸುತ್ತದೆ. ಇದು ಸಂತಾನ ಆಧಾರದ ಮೇಲೆ ರಚಿತವಾಗಿದೆ. ಸಾಮಾಜಿಕವಾಗಿ ಅಂಗೀಕೃತವಾದ ಶಾರೀರಿಕ ಸಂಬಂಧ ರಕ್ತ ಸಂಬಂಧ ಹಾಗೂ ವಿವಾಹದ ಮೂಲಕ ಸೃಷ್ಟಿಯಾಗುವ ಸಾಮಾಜಿಕ ಸಂಬಂಧಗಳ ಬಲೆಯಾಗಿದೆ. ಇದು ಸಾರ್ವತ್ರಿಕವಾಗಿದೆ. ವ್ಯಕ್ತಿಗಳನ್ನು ಸಾಮಾಜೀಕರಣಗೊಳಿಸಲು ಮತ್ತು ಸಮೂಹದ ಐಕ್ಯತೆಯನ್ನು ಕಾಪಾಡಿಕೊಂಡು ಬರಲು ರಕ್ತಸಂಬಂಧ ಮಹತ್ವದ ಪಾತ್ರ ವಹಿಸುತ್ತದೆ ಎಂದು ಇರಾವತಿಯವರು ಅಭಿಪ್ರಾಯಪಟ್ಟಿದ್ದಾರೆ.

ಮಾನವ ಸಮಾಜಜೀವಿ, ಅವನು ಒಬ್ಬಂಟಿಗನಾಗಿ ಬಾಳಲಾರ, ಅವನು ಸಮಾಜದಲ್ಲಿ ಏಕಾಂಗಿಯಾಗಿರಲು ಸಾಧ್ಯವಿಲ್ಲ. ಹುಟ್ಟಿನಿಂದ ಸಾಯುವವರೆಗೆ ಸತತವಾಗಿ ಸಾಕಷ್ಟು ಜನರಿಂದ ಸುತ್ತುವರಿಯಲ್ಪಡುತ್ತಾನೆ. ಅವರಲ್ಲಿ ಕೆಲವರು ಬಂಧುಗಳಾಗಿರಬಹುದು ಸ್ನೇಹಿತರಾಗಿರಬಹುದು. ನೆರೆಹೊರೆಯವರಾಗಿರಬಹುದು, ಪರಿಚಿತರಾಗಿರಬಹುದು ಇಲ್ಲವೆ ಅಪರಿಚಿತರಾಗಿರಬಹುದು. ವ್ಯಕ್ತಿ ಮತ್ತು ಇತರ ಸದಸ್ಯರೊಡನೆ ಹೊಂದಿರುವ ಸಂಬಂಧ ರಕ್ತ ಸಂಬಂಧವಾಗಿರಬಹುದು. ಅಥವಾ ವಿವಾಹದ ಮೂಲಕ ಸಂಬಂಧ ಏರ್ಪಟ್ಟಿರಬಹುದು. ಅವರಲ್ಲಿಯೂ ಕೆಲವರು ಸಮೀಪ ಹಾಗೂ ದೂರದ ಬಂಧುಗಳಾಗಿರುತ್ತಾರೆ. ಒಟ್ಟಾರೆಯಾಗಿ ರಕ್ತಸಂಬಂಧ ಮತ್ತು ವಿವಾಹದ ಮೂಲಕ ಬಂಧನಕ್ಕೊಳಪಡುವ ಜನರ ಸಮೂಹವನ್ನು ಬಂಧುತ್ವ ಎಂದು ಕರೆಯಲಾಗಿದೆ. ಈ ಸಂಬಂಧಗಳು ಸಾಮಾಜಿಕ ಅಂತಃಕ್ರಿಯೆ ಹಾಗೂ ಅಂಗೀಕೃತ ಸಮಾಜದ ಪರಿಣಾಮವಾಗಿ ರೂಪಿಸಿವೆ.

ಮಾನವಶಾಸ್ತ್ರದಲ್ಲಿ 'ಭಾಂದವ್ಯದ' ಪರಿಕಲ್ಪನೆ ತುಂಬಾ ಪ್ರಾಮುಖ್ಯತೆ ಪಡೆದಿದೆ.

**ಮಾನವಶಾಸ್ತ್ರ ಪದಕೋಶದನ್ವಯ** (Dictionary of Anthropology) "ರಕ್ತ ಸಂಬಂಧವು ಸಮಾಮಾಜಿಕವಾಗಿ ಅಂಗೀಕೃತವಾದ ಭಾಂದವ್ಯಗಳು ವಂಶವಾಹಿನಿಯ ಬಂಧನಗಳ ಆಧಾರಿತವಾದವುಗಳಾಗಿವೆ."

ಇರಾವತಿಯವರ ಹೆಚ್ಚು ಗಮನ ಸೆಳೆದ ಸಂಗತಿಗಳೆಂದರೆ ಭಾರತೀಯ ಸಮಾಜ ಮತ್ತು ಭಾರತೀಯ ಸಾಮಾಜಿಕ ಸಂಸ್ಥೆಗಳು. ಅದರಲ್ಲೂ ವಿಶೇಷ ಬರಹಗಳೆಂದರೆ ಬಂಧುತ್ವ ವ್ಯವಸ್ಥೆಯನ್ನು ಕುರಿತಾದವುಗಳು. ಅವರು ಸಾಂಪ್ರದಾಯಿಕ ಜಾತಿ ಪದ್ಧತಿಯನ್ನು ಅಧ್ಯಯನಿಸಿದರೂ ಅಲ್ಲಿಯೂ ಕೂಡಾ ಅವರು ಬಂಧುತ್ವದ ಹಿನ್ನೆಲೆಯಲ್ಲಿಯೇ ಅದನ್ನು ಅಧ್ಯಯನ ಮಾಡಿರುವರು. ಸಾಮಾಜಿಕ ರಚನೆ ಮತ್ತು ಪ್ರಕ್ರಿಯೆಗಳಲ್ಲಿ ಬಂಧುತ್ವ ನಿರ್ವಹಿಸುವ ಪಾತ್ರವನ್ನು ವಿಶ್ಲೇಷಿಸಿದ್ದಾರೆ. ಅವರ ಪ್ರಕಾರ ಜಾತಿಯೂ ಕೂಡಾ ಒಂದು ಬಂಧುತ್ವ ವ್ಯವಸ್ಥೆಯಾಗಿದೆ. ಅದು ಒಂದು ವಿಶಾಲ ಕುಟುಂಬವಿದ್ದಂತೆ, ಜಾತಿಯ ಸದಸ್ಯರುಗಳು ಬಂಧುತ್ವದ ಹಿನ್ನಲೆಯಲ್ಲಿಯೆ ಒಂದುಗೂಡುತ್ತಾರೆ. ಅವರು ಬಂಧುತ್ವದ ಬಗ್ಗೆ ಅನೇಕ ಲೇಖನಗಳನ್ನು ಬರೆದಿದ್ದರೂ ಅವರಿಗೆ ಹೆಚ್ಚು

ಜನಪ್ರಿಯತೆಯನ್ನು ತಂದು ಬರವಣಿಗೆ ಎಂದರೆ 'ಭಾರತದಲ್ಲಿ ಬಂಧುತ್ವ ಸಂಘಟನೆ' ಎನ್ನುವ ಕೃತಿಯಾಗಿದೆ. ಇರಾವತಿಯವರು ಕೇವಲ ಯಾವುದೇ ಒಂದು ಭಾಗದ ಮತ್ತು ರಾಜ್ಯದ ಬಗೆಗಿನ ಬಂಧುತ್ವದ ಬಗ್ಗೆ ಆಲೋಚಿಸದೆ ಸಮಗ್ರ ದೇಶದ ಮತ್ತು ಭಿನ್ನ ಭಿನ್ನ ರಾಜ್ಯಗಳಲ್ಲಿನ ಬಂಧುತ್ವ ಕುರಿತು ಅಧ್ಯಯನಿಸಿದ್ದಾರೆ. ಇಲ್ಲಿ ಅವರು ನೀಡಲಾದ ಮಾಹಿತಿಯು ನಾಲ್ಕು ಸಾಂಸ್ಕೃತಿಕ ವಲಯಗಳಿಗೆ ಸಂಬಂಧಪಟ್ಟಿರುವದಾಗಿದೆ. ಉತ್ತರವಲಯ, ಕೇಂದ್ರವಲಯ, ಮಧ್ಯವಲಯ ಮತ್ತು ದಕ್ಷಿಣ ವಲಯ ಹಾಗೂ ಪೂರ್ವವಲಯ ಭಾರತದ ವಿಭಿನ್ನ ರಾಜ್ಯಗಳಲ್ಲಿ ಪರಿಸರದಲ್ಲಿ ಅದಕ್ಕೆ ಸಂಬಂಧಸಿ ಬಳಸಲಾಗುವ ಪದಗಳು ವಿವಾಹಪದ್ಧತಿ, ಆಸ್ತಿ ಹಂಚಿಕೆಯ ಬಗೆಗಿನ ನಿಯಮಗಳು ಹಾಗೂ ವಂಶಾವಳಿಯ ನಿಯಮಗಳು ಮತ್ತು ಆಚರಣೆಗಳನ್ನು ಇತ್ಯಾದಿ ಕುರಿತು ಅಧ್ಯಯನಿಸಿದರು. ಈ ಎಲ್ಲ ಸಂಗತಿಗಳನ್ನು ಕುರಿತು ಹಾಗೂ ಅವುಗಳಲ್ಲಿರುವ ವ್ಯತ್ಯಾಸಗಳನ್ನು ಚರ್ಚಿಸಿರುವರು.

ಭಾರತೀಯ ಸಮಾಜದ ಕೆಲವು ಕಟ್ಟುಕಥೆಗಳನ್ನು, ಸಂಪ್ರದಾಯಗಳನ್ನು, ಜಾನಪದ ಕಥೆಗಳನ್ನು ತಮ್ಮ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಂಡರು. ಈ ತರಹದ ವಿವರಗಳು ಉತ್ತರ ವಲಯಕ್ಕೆ ಸಂಬಂಧಿಸಿದ ಒಂದು ಸಾಮಾನ್ಯೀಕೃತವಾದ ಮಾದರಿಯನ್ನು ರೂಪಿಸುವ ಯತ್ನ ಮಾಡಿದರೂ, ಇಷ್ಟು ಮಾತ್ರವಲ್ಲದೆ ಒಂದು ವಲಯ ಇನ್ನೊಂದು ವಲಯ ಯಾವ ರೀತಿಯಲ್ಲಿ ಭಿನ್ನವಾಗಿದೆ ಎನ್ನುವುದನ್ನು ಚಿತ್ರಿಸುವ ಪ್ರಯತ್ನ ಕೂಡಾ ಮಾಡಿದ್ದು ಈ ಕೃತಿಯಲ್ಲಿ ಕಂಡುಬರುತ್ತದೆ.

ಇರಾವತಿ ಕರ್ವೆಯವರು ಸಾಮಾಜಿಕ ವರ್ತನೆಗೆ ಸಂಬಂಧಿಸಿದ ಒಂದು ನಮೂನೆಯನ್ನು ಗುರುತಿಸುವರು. ಸಾಂಸ್ಕೃತಿಕ ಪ್ರಸರಣ, ಸಾಂಸ್ಕೃತಿಕ ಸಂಗ್ರಹಣ ಮತ್ತು ಸಾಂಸ್ಕೃತಿಕ ಹೊಂದಾಣಿಕೆಯಂತಹ ಪ್ರಕ್ರಿಯೆಗಳಲ್ಲಿ ಆಸಕ್ತಿಯನ್ನು ಹೊಂದಿದ್ದರೂ, ಆಯಾ ಭಾಗಗಳಲ್ಲಿನ ಕೆಲವು ರೂಢಿಗಳು ಬಂಧುತ್ವವನ್ನು ಸೂಚಿಸುವ ಶಬ್ದಗಳು ಮತ್ತು ರೂಪಗಳನ್ನು ಅವುಗಳ ಪ್ರಾದೇಶಿಕ ಹಿನ್ನೆಲೆಯಲ್ಲಿ ವಾಸಿಸುವಿಕೆ ಹಾಗೂ ಇತರ ಜನಸಮೂಹ ಮತ್ತು ಜಾತಿಯೊಂದಿಗೆ ಹೊಂದಿರುವ ಸಂಪರ್ಕಗಳ ಹಿನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು ಎಂದು ಕರ್ವೆಯವರು ಅಭಿಪ್ರಾಯ ಪಟ್ಟಿದ್ದಾರೆ. ಭಾರತದಂತಹ ವೈವಿಧ್ಯತೆಯಿಂದ ಕೂಡಿದ ಸಮೂಹದಲ್ಲಿ ಈ ಮಾತು ಇನ್ನು ಪ್ರಸ್ತುತವಾದುದು ಎಂದು ತಿಳಿಸಿದ್ದಾರೆ.

**ಬಂಧುತ್ವದ ಕೆಲವು ಮೂಲಭೂತ ಅಂಶಗಳು:**

- ಬಂಧುತ್ವ ಲಿಂಗವನ್ನು ಪರಿಗಣಿಸುತ್ತದೆ. ಉದಾ: ಅಣ್ಣ, ತಂಗಿ, ಇತ್ಯಾದಿ
- ಬಂಧುತ್ವ ತಲೆಮಾರನ್ನು ಪರಿಗಣಿಸುತ್ತದೆ ಉದಾ: ತಾಯಿ-ಮಗಳು ಎಂಬುದು ತಾಯಿ ಮತ್ತು ಮಗಳ ಎರಡು ತಲೆಮಾರುಗಳನ್ನು ಸೂಚಿಸುವದರ ಜೊತೆಗೆ ರಕ್ತ ಸಂಬಂಧವನ್ನು ಸೂಚಿಸುತ್ತದೆ.
- ಬಂಧುತ್ವ ರಕ್ತಸಂಬಂಧವನ್ನು ಪರಿಗಣಿಸುತ್ತದೆ.
- ಬಂಧುತ್ವ ಆಪ್ತತೆಯನ್ನು ಪರಿಗಣಿಸುತ್ತದೆ.



Scanned with Ca

ಮಾಧ್ಯಮಿಕ ಸಂಬಂಧಿಯಾದರೆ ಆತನ ಪತ್ನಿ ಆತನಿಗೆ ಪ್ರಾಥಮಿಕ ಸಂಬಂಧಿಯಾಗಿರುತ್ತಾಳೆ. ಅದೇ ತೆರನಾಗಿ ನನ್ನ ತಮ್ಮನ ಭಾವ ಮೈದುನ ಇಲ್ಲಿ ತಮ್ಮ ಪ್ರಾಥಮಿಕ ಸಂಬಂಧವಾದರೆ, ಆತನ ಭಾವ ಮಾಧ್ಯಮಿಕ ಸಂಬಂಧದವನಾಗಿದ್ದಾನೆ.

ಮುರ್ಡಕರವರ ಪ್ರಕಾರ 33 ಮಾಧ್ಯಮಿಕ ಸಂಬಂಧಗಳು ಮತ್ತು 151 ತೃತಿಯ ಸಂಬಂಧಗಳು ವ್ಯಕ್ತಿಯದಾಗಿರುತ್ತದೆ.

## ಬಂಧುತ್ವದ ಆಚರಣೆಗಳು (Practices of Kinship)

ರಕ್ತಸಂಬಂಧ ಪದಕಲ್ಪನೆಗಳ ಕುಟುಂಬದ ಸದಸ್ಯರ ಸಂಬಂಧಗಳನ್ನು ಸೂಚಿಸುವುದಾಗಿದೆ. ಇದರಲ್ಲಿ ಹಲವಾರು ಪ್ರಕಾರಗಳಿವೆ. ಮಾರ್ಗನ ಎಂಬುವರು ರಕ್ತಸಂಬಂದದ ಪದಗಳನ್ನು ವಿಶೇಷವಾಗಿ ಅಧ್ಯಯನಗೈದಿದ್ದಾರೆ. ಅವರ ಪ್ರಕಾರ ಈ ಪದಗಳನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿದ್ದಾರೆ.

1) ವರ್ಗೀಕರಣ ಪದ್ಧತಿ ಅಥವಾ ಶ್ರೇಣಿಕೃತ Classificatory system

2) ವರ್ಣನಾತ್ಮಕ ಪದ್ಧತಿ Descriptive system

1) **ವರ್ಗೀಕರಣ ಪದ್ಧತಿ (Classificatory system):** ಈ ಪದ್ಧತಿಯನ್ವಯ ಒಂದೆ ಪದಕ್ಕೆ ಹಲವಾರು ಪದಗಳಿಂದ ಕರೆಯುವ ಪದ್ಧತಿ ರೂಡಿಯಲ್ಲಿದೆ. ಉದಾಹರಣೆಗಾಗಿ ಆಂಗ್ಲದಲ್ಲಿ ಕರೆಯುವ 'uncle' ಎಂಬ ಪದ ಸಂಬಂಧಗಳನ್ನು ವಿಂಗಡಿಸಿ ಕರೆಯುವದಾಗಿದೆ. ಚಾಚಾ (chacha) ಮಾಮಾ (mama) ಮೌಸಾ (mausa) ಫೋಫಾ (foofa) ತಾವೂ (taoo) ಮುಂತಾದವುಗಳು. ಅದೆ ತೆರನಾಗಿ ನೆಫ್ಯೂ (nephew) ಸಹೋದರನ ಅಥವಾ ಸಹೋದರಿಯ ಮಗ, ಸೋದರಳಿಯನನ್ನು ಕಜಿನ (cousin) ಇನ್-ಲಾಸ್ (in-laws) ಇತ್ಯಾದಿಗಳಾಗಿವೆ.

ಅಸ್ಸಾಮನ ಸೆಮಾನಾಗಾ ಜನಾಂಗದಲ್ಲಿ 'ಅಜ' ಎಂಬ ಪದವನ್ನು ತಾಯಿ, ತಂದೆಯ ತಮ್ಮನ ಪತ್ನಿ ತಾಯಿಯ ತಂಗಿಗೆ ಕರೆಯುವುದಾಗಿದೆ.

ಕುರೆ ಬುಡಕಟ್ಟು ಜನಾಂಗದವರಲ್ಲಿ 'ಹೆಪೂ' ಎಂಬ ಪದವನ್ನು ತಂದೆಯ ತಂದೆ, ತಾಯಿಯ ತಂದೆ, ತಾಯಿಯ ಅಣ್ಣ, ಹೆಂಡತಿಯ ತಂದೆ, ತಾಯಿಯ ಅಣ್ಣನ ಮಗ, ಹೆಂಡತಿಯ ಅಣ್ಣ, ಹೆಂಡತಿಯ ಅಣ್ಣನ ಮಗ, ಹೀಗೆ ವಿವಿಧ ವಯಸ್ಸಿನ ಜನರಿಗೆ ಕರೆಯುವ ಪದವಾಗಿದೆ.

2) **ವರ್ಣನಾತ್ಮಕ ಪದ್ಧತಿ (Descriptive system):** ಈ ಪದ್ಧತಿಯನ್ವಯ ಒಂದು ಪದ ಒಂದು ನಿಖರ ಸಂಬಂಧವನ್ನು ಮಾತ್ರ ಸೂಚಿಸುವುದಾಗಿದೆ. ಇದು ಒಬ್ಬ ಮತ್ತು ಮತ್ತೊಬ್ಬರ ನಡುವಿನ ಸಂಬಂಧವನ್ನು ಸ್ಪಷ್ಟವಾಗಿ ಕಾಣುವುದಾಗಿದೆ. ಉದಾಹರಣೆಗಾಗಿ ತಂದೆ, ತಾಯಿ, ಹಿಂದಿ ಭಾಷೆಯಲ್ಲಿ ಉಪಯೋಗಿಸುವ ಪದಗಳಾದ ಚಾಚಾ, ಮಾಮಾ, ಸಾಲಾ, ಬಾಂಜಾ, ಬಾಭಿ, ದೇವರ, ಇತ್ಯಾದಿಗಳಾಗಿವೆ.



Scanned with Ca

**ರಕ್ತ ಸಂಬಂಧದ ರಿವಾಜು ಅಥವಾ ವಾಡಿಕೆ (Kinship usage):** ರಕ್ತಸಂಬಂಧದ ಅಧ್ಯಯನ ಕೇವಲ ವರ್ಗೀಕರಣ ಪದ್ಧತಿ ಮತ್ತು ವರ್ಣಾನಾತ್ಮಕ ಪದ್ಧತಿಗಳಿಗೆ ಮಾತ್ರ ಸೀಮಿತವಾಗಿಲ್ಲ. ಇದು ಇನ್ನು ಹಲವಾರು ಸ್ವಭಾವದ ನಮೂನೆಗಳನ್ನು ಭಿನ್ನ ಭಿನ್ನವಾಗಿ ನೋಡುವುದಾಗಿದೆ. ಪ್ರತಿಯೊಂದು ಸಂಬಂಧ ಒಂದು ತರಹದ ಸ್ವರೂಪವನ್ನು ಹೊಂದಿರುತ್ತದೆ. ತಂದೆ ಮಗನ ಸಂಬಂಧ ಒಂದು ತೆರನಾದ ಸಂಬಂಧವಾದರೆ ತಂದೆ-ತನ್ನ ಪತ್ನಿಯ ಜೊತೆಗೆ ಇರುವ ಪ್ರೇಮಭಾವದ ಸಂಬಂಧವಾಗಿದೆ. ಈ ರೀತಿಯಾಗಿ ರಕ್ತ ಸಂಬಂಧದ ವಾಡಿಕೆಗಳು ವಿವಿಧ ಸಂಬಂಧದ ಸ್ವರೂಪವನ್ನು ನಿರ್ದೇಶಿಸುತ್ತದೆ. ಅಂತಹ ಸಂಬಂಧಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

1) **ದೂರವಿರುವಿಕೆ (Avoidance):** ಎಲ್ಲ ಸಮಾಜಗಳಲ್ಲಿ ಸಂಬಂಧಿಗಳ ದೂರವಿರುವಿಕೆಯ ವಾಡಿಕೆಯನ್ನು ಒಂದಿಲ್ಲಾಒಂದು ರೀತಿಯಲ್ಲಿ ಕಾಣಬಹುದು. ಇದರರ್ಥವಿಷ್ಟೆ ಇಬ್ಬರು ಸಂಬಂಧಿಗಳು ಒಬ್ಬರಿಗೊಬ್ಬರು ಪರಸ್ಪರ ದೂರವಿರುವುದಾಗಿದೆ. ಒಬ್ಬರಿಗೊಬ್ಬರು ತಪ್ಪಿಸಿಕೊಳ್ಳುತ್ತಾರೆ ಅಥವಾ ದೂರವಿರಲು ಬಯಸುತ್ತಾರೆ. ಅವರು ಲೈಂಗಿಕ ಸಂಪರ್ಕದಿಂದ ಮಾತ್ರ ದೂರವಾಗಿರದೆ ಕೆಲವು ಸಂದರ್ಭಗಳಲ್ಲಿ ಒಬ್ಬರಿಗೊಬ್ಬರು ಮುಖವನ್ನು ಸಹ ನೋಡಬಯಸುವುದಿಲ್ಲ. ಪುರುಷ ಮತ್ತು ಸ್ತ್ರೀ ಒಂದೇ ಕಡೆಯಿರುವ ಪ್ರಸಂಗದಲ್ಲಿ ಉಡುಪು, ಮಾತು, ಇರುವ ಭಂಗಿ ಹಾಗೂ ಸನ್ನೆ ಇತ್ಯಾದಿಗಳ ಪ್ರಮಾಣದಲ್ಲಿಯೂ ದೂರವಿರುವುದನ್ನು ಅವಲೋಕಿಸಬಹುದಾಗಿದೆ.

ಉದಾಹರಣೆಗಾಗಿ ಮಾವ (Father-in-law) ಸೊಸೆಯಿಂದ (Sasur) ದೂರವಿರುತ್ತಾನೆ. ಅಳಿಯ (Son-in-law) ಅತ್ತಿಯಿಂದ ದೂರವಿರುತ್ತಾನೆ.

ಯುಕಾಫಿರಗಳಲ್ಲಿ ಅಳಿಯನಾದವನು ಅತ್ತಿ ಹಾಗೂ ಮಾವನ ಮುಖವನ್ನು ಸಹ ನೋಡಲಾರದೆ ದೂರವಿರುತ್ತಾನೆ.

ಓಷ್ಟಾಯಿಕ ಪಂಗಡಗಳಲ್ಲಿ ವಿವಾಹಿತ ವ್ಯಕ್ತಿ ತನಗೆ ಮಕ್ಕಳಾಗುವವರೆಗೂ ಅತ್ತೆಯ ಮುಖವನ್ನು ನೋಡಲಾರ.

ಶ್ರೀಲಂಕಾದ ವೆಡ್ಡಾಸ ಜನಾಂಗಗಳಲ್ಲಿ ಹಿರಿಯ ಅಣ್ಣ ಮತ್ತು ತಂಗಿಯರು ಒಂದೇ ಕಡೆ ಇರುವುದಿಲ್ಲ ಮತ್ತು ಒಟ್ಟಾಗಿ ಕುಳಿತು ಊಟ ಮಾಡುವುದಿಲ್ಲ.

ಇನ್ನು ಕೆಲವು ಸಮಾಜಗಳಲ್ಲಿ ಪತಿಯಾದವನು ತನ್ನ ಪತ್ನಿಯಿಂದ ಸಾಮೂಹಿಕ ಸ್ಥಳದಲ್ಲಿ ಅಥವಾ ಇತರರ ಸಮ್ಮುಖದಲ್ಲಿ ಮಾತಾಡುವುದರಿಂದ, ಮುಟ್ಟುವುದರಿಂದ ದೂರವಿರುತ್ತಾನೆ.

ಹಿಂದೂ ಕುಟುಂಬಗಳಲ್ಲಿ ಪರದಾ ಪದ್ಧತಿ ಸಂಬಂಧಿಗಳ ದೂರವಿರುವಿಕೆಯನ್ನು ಪ್ರತಿಪಾದಿಸುತ್ತದೆ.

ದೂರವಿರುವಿಕೆಯ ನಿಯಮವನ್ನು ಎರಡು ಉದ್ದೇಶಗಳಿಂದ ನಂಬಲಾಗಿದೆ.

1) ಸಂಬಂಧಿಕರ ಉಭಯ ಪಕ್ಷಗಳಲ್ಲಿ ಗೊಂದಲಕ್ಕೆ ಅವಕಾಶ ಮಾಡಿ ಕೊಡಬಾರದೆನ್ನುವ ಕಾರಣ.



Scanned with Ca

2) ದೂರವಿರುವಿಕೆಯ ನಿಯಮ ಸಂಬಂಧಿಕರಲ್ಲಿ ಲೈಂಗಿಕ ಸಂಪರ್ಕ ನಿಷೇಧಿಸುವ ಪರಿಣಾಮವಾಗಿ ಜಾರಿಯಾಗಿದೆ. (ಮರ್ಡಕರವರ ಪ್ರಕಾರ)

ಇವುಗಳಲ್ಲದೆ ಹಲವಾರು ಪಂಗಡಗಳಲ್ಲಿ ಇದಕ್ಕೆ ಹಲವಾರು ರೀತಿಯಲ್ಲಿ ದೂರವಿರುವಿಕೆಯ ಬಗ್ಗೆ ವಿವರಣೆ ನೀಡಲಾಗಿದೆ.

2) **ವಿನೋದ ಸಂಬಂಧಗಳು ಅಥವಾ ತಮಾಷೆ ಮಾಡುವ ಸಂಬಂಧಗಳು (Joking relationship):** ಇದು ದೂರವಿರಿಸುವಿಕೆಯ ನಿಯಮ ವಿರೋಧವಾಗಿದೆ. ವಿನೋದ ಸಂಬಂದ ಮಿತ್ರತ್ವ ಮತ್ತು ಸಂಘರ್ಷಾತ್ಮಕ ನಿಲುವನ್ನು ವ್ಯಕ್ತಿ ಹಾಗೂ ಸಮೂಹಗಳಲ್ಲಿ ಕೆಲವು ಸಂದರ್ಭಗಳಲ್ಲಿ ಕಾಣಬಹುದು. ಈ ಸಂಬಂಧಗಳಲ್ಲಿ ವ್ಯಂಗ್ಯ, ದ್ವಂದ್ವ, ಮೋಜು, ತಮಾಷೆ, ಸಲುಗೆಯಿಂದ ವ್ಯವಹರಿಸುವುದನ್ನು ವಿನೋದ ಸಂಬಂಧಿಗಳಲ್ಲಿ ಕಾಣಬಹುದು. ಇಲ್ಲಿ ಅಸಭ್ಯ, ಒರಟಾದ ಮತ್ತು ಲೈಂಗಿಕ ವಿಷಯಗಳ ಪರೋಕ್ಷತೆಯನ್ನು ಕೂಡಾ ಬಿಂಬಿಸುವುದಾಗಿದೆ. ಸೋದರಮಾವ - ಸೋದರ ಅಳಿಯ, ಸೋದರ ಅತ್ತೆ, ಸೋದರ ಅಳಿಯ ಹಾಗೂ ಸೊಸೆಯಂದಿರು, ಭಾವ-ನಾದನಿಯರು (ದೇವರ-ಬಾಬಿ) (ಜಿಜಾ-ಸಾಲಿ), ಅಜ್ಜ-ಮೊಮ್ಮಕ್ಕಳು ಮುಂತಾದವರಲ್ಲಿ ಕಾಣಬಹುದು.

ಕ್ರೊ-ಇಂಡಿಯನರಲ್ಲಿ ಒಬ್ಬ ವ್ಯಕ್ತಿ ಮತ್ತು ಆತನ ಹೆಂಡತಿಯ ತಂಗಿಯರಲ್ಲಿ ವಿನೋದ ಹಾಗೂ ಲೈಂಗಿಕ ವಿಷಯಗಳ ಬಗ್ಗೆ ಮೋಜು ಮಾಡುವುದನ್ನು ಕಾಣಬಹುದಾಗಿದೆ. ವಿನೋದ ಸಂಬಂಧಗಳ ಸ್ಪಷ್ಟ ಕಾರಣ ತಿಳಿದಿಲ್ಲ. ಸಮಾಜದಲ್ಲಿ ನೇರವಾಗಿ ಹೇಳಿದರೆ ತಪ್ಪು ತಿಳಿಯಬಹುದೆನ್ನುವ ಕಾರಣದಿಂದ ವಿನೋದ ಸಂಬಂಧದ ಜನರಿಂದ ವ್ಯಂಗ್ಯವಾಗಿ, ದ್ವಂದವಾಗಿ, ಅಪರಾಧ ಪ್ರಜ್ಞೆ ಮೂಡಿಸಿ, ಸಮಸ್ಯೆ ಬಗಹರಿಸುವುದಾಗಿದೆ ಎಂದು ತತ್ವಚಿಂತಕರ ಅಭಿಪ್ರಾಯವಾಗಿದೆ.

3) **ಶಿಶುಮೂಲ ಸಂಬೋಧನೆ (Tekononymy):** ಇದು ಮಗುವಿನ ಹೆಸರಿನ ಮೂಲಕ ತಂದೆ-ತಾಯಿಗಳನ್ನು ಗುರುತಿಸುವ ಪದ್ಧತಿಯಾಗಿದೆ. ಸಂಬಂದಿಗಳಲ್ಲಿ ನೇರವಾಗಿ ಒಬ್ಬರನ್ನೊಬ್ಬರು ಪರಸ್ಪರ ಕರೆಯದೆ ಇನ್ನೊಬ್ಬ ಸಂಬಂದಿಯ (ಮಗುವಿನ) ಮುಖಾಂತರ ಕರೆಯಿಸಿಕೊಳ್ಳುವ ಪದ್ಧತಿಯಾಗಿದೆ. ಈ Tekononymy ಎಂಬ ಪದವನ್ನು ಮಾನವಶಾಸ್ತ್ರದಲ್ಲಿ ಮೊಟ್ಟ ಮೊದಲಿಗೆ ಟೈಲರ ಎಂಬ ಸಮಾಜಶಾಸ್ತ್ರಜ್ಞರು ಬಳಸಿದ್ದಾರೆ. ಇದು ಗ್ರೀಕ ಮೂಲಪದದಿಂದ ಉತ್ಪತ್ತಿಯಾಗಿದೆ. ಇರ್ವ ಸಂಬಂಧಿಗಳ ಸಂಪರ್ಕಕ್ಕೆ ಒಬ್ಬ ಮಧ್ಯವರ್ತಿ ಇರುವದನ್ನು ಕಾಣಬಹುದಾಗಿದೆ. ಹಿಂದೂ ಸಾಂಪ್ರದಾಯಿಕ ಕುಟುಂಬದಲ್ಲಿ ಪತ್ನಿಯಾದವಳು ಪತಿಯನ್ನು ನೇರವಾಗಿ ಕರೆಯದೆ ತನ್ನ ಮಕ್ಕಳ ಮುಖಾಂತರ ಕರೆಯುವ ಪರಿಪಾಠವನ್ನು ಅವಲೋಕಿಸಬಹುದು. ಅದೇ ತೆರನಾಗಿ ಪತಿಯಾದವನು ಕೂಡಾ ತನ್ನ ಪತ್ನಿಯನ್ನು ನೇರವಾಗಿ ಹೆಸರಿಸಿ ಕರೆಯುವ ಬದಲು ಅನ್ಯನ್ಯ ಪದಗಳಿಂದ ಕರೆಯುವದು ಜನಿಜನಿತವಾಗಿದೆ.



Scanned with Ca

ಮಾನವ ಶಾಸ್ತ್ರಜ್ಞರಾದ ಜೇಮ್ಸ್ ಫ್ರೆಜರವರು ಈ ತರಹದ ವಹಿವಾಟು ಅಥವಾ ವಾಡಿಕೆ ಆಸ್ಟ್ರೇಲಿಯಾ, ಆಫ್ರಿಕಾ, ಅಂಡಮಾನ, ಕೊಲಂಬಿಯಾ, ಚೀನಾ, ಐರ್ಲ್ಯಾಂಡ, ಉತ್ತರ ಸೈಬೇರಿಯಾ, ಮುಂತಾದವುಗಳಲ್ಲಿ ಕಾಣಬಹುದು.

4) **ತಾಯಿಯ ಸೋದರ ಸೋದರಮಾವ (Avanculate):** ಇದು ಮಾತೃಪ್ರಧಾನ ಕುಟುಂಬದ ಗುಣಲಕ್ಷಣವಾಗಿದೆ. ಇದು ಕೆಲವು ಸಮಾಜಗಳಲ್ಲಿ ಒಬ್ಬ ವ್ಯಕ್ತಿ ಮತ್ತು ಆತ ತಾಯಿಯ ಸಹೋದರನೊಡನೆ ಹೊಂದಿರುವ ವಿಶೇಷ ಸಂಬಂಧವಾಗಿದೆ. ಎಲ್ಲ ಪುರುಷ ಸಂಬಂಧಿಗಳಲ್ಲಿ ಸೋದರಮಾವನ ಸಂಬಂಧ ಪ್ರಧಾನವಾಗಿದೆ. ಇದು ಲ್ಯಾಟಿನ ಬಾಷೆಯ ಪದವಾಗಿದೆ (Avanculate) ಲ್ಯಾಟಿನ ಪದದ Avanculus ಎಂದರೆ ತಾಯಿಯ ಸಹೋದರ ಎಂದರ್ಥ. ಮಾತೃವಂಶದ ಸಮಾಜಗಳಲ್ಲಿ ತಾಯಿಯ ಸಹೋದರನ ಅಧಿಕಾರವನ್ನು ತಂಗಿಯ ಮಕ್ಕಳ ನಿಯಂತ್ರಣ ಮತ್ತು ಲೋಕ ವ್ಯವಹಾರದಲ್ಲಿ ತೊಡಗುವಾಗ ಆತನ ಪಾತ್ರ ಹಿರಿದುದಾಗಿದೆ.

5) **ತಂದೆಯ ಸಹೋದರಿ - ಸೋದರತ್ತೆ (Amitate):** ಪಿತೃ ಪ್ರಧಾನ ಸಮಾಜದಲ್ಲಿ ತಂದೆಯ ತಂಗಿಯ ಪಾತ್ರ ಪ್ರಮುಖವಾಗಿದೆ. ತಾಯಿಯ ಪಾತ್ರಕ್ಕಿಂತ ಹೆಚ್ಚು ವಿಶೇಷವಾದದ್ದೂ ತಂದೆಯ ಸಹೋದರಿಯದಾಗಿದೆ. ಮಗುವಿನ ನಾಮಕರಣ ಸಂಸ್ಕಾರಕ್ಕೆ ಮಗುವಿನ ಹೆಸರನ್ನು ನೇರವಾಗಿ ತಾಯಿ ಅಥವಾ ತಂದೆಯಿಂದ ಇಡಿಸದೆ ತಂದೆಯ ಸಹೋದರಿಯಿಂದ ಹೆಸರಿಡುವ ಪದ್ಧತಿ ಪ್ರಧಾನವಾಗಿದೆ. ಈ ವಾಡಿಕೆ ನೀಲಗಿರಿಯ ತೊಡವರಲ್ಲಿ, ಕ್ರೊ-ಇಂಡಿಯನ ಮುಂತಾದ ಪಂಗಡದವರಲ್ಲಿ ಕಾಣಬಹುದು.

6) **ಪ್ರಸೂತಿಕಾ ವರ್ತನೆ (Convade):** ಹೆಂಡತಿಯು ಮಗುವಿಗೆ ಜನ್ಮ ನೀಡಿದಾಗ ಗಂಡನು ಸಹ ಅವಳಂತೆಯೆ ಪಥ್ಯಕ್ಕೊಳಗಾಗಿ ನಿಯಮಿತ ಆಹಾರವನ್ನು ಸೇವಿಸುತ್ತಾ ಕೆಲವು ನಿಷೇದಗಳನ್ನು ಆಚರಿಸುವುದನ್ನು ಕಾನವೇಡ ಎಂದು ಕರೆಯಲಾಗುತ್ತದೆ.

ಈ ತೆರನಾದ ವಿಲಕ್ಷಣವಾದ ವಹಿವಾಟು ಆದಿವಾಸಿ ಸಮಾಜಗಳಲ್ಲಿ ಕಂಡುಬರುತ್ತದೆ, ಉದಾಹರಣೆಗಾಗಿ ಭಾರತದಲ್ಲಿನ ಖಾಸಿ ಮತ್ತು ಥೋಡಾ ಜನಾಂಗ, ದಕ್ಷಿಣ ಆಫ್ರಿಕಾದ ಕರೀಬ್ಸ ಜನಾಂಗದಲ್ಲಿ ಕಾಣಬಹುದು. ಇದು ಕೇವಲ ಪತಿ-ಪತ್ನಿಯರಿಗೆ ಮಾತ್ರ ಸಂಬಂಧಪಟ್ಟದ್ದಾಗಿದೆ. ಪತ್ನಿಯ ಹೆರಿಗೆಯಾದ ದಿನಮಾನಗಳಲ್ಲಿ ಅಥವಾ ಮಗುವಿಗೆ ಜನ್ಮ ನೀಡಿದ ಸಂದರ್ಭದ ದಿನಗಳಲ್ಲಿ ಪತಿಯಾದವನು ಅಸಮ್ಮತವಾದ ರೀತಿಯಲ್ಲಿ ಮುಂದುವರಿಯುವುದಾಗಿದೆ. ಅರ್ಥಾತ ಪತ್ನಿಯ ಹೆರಿಗೆಯ ನಂತರ ಸ್ಥಿತಿಯಂತೆ ಪತಿಯು ಕೂಡಾ ಕಠಿಣ ಪರಿಶ್ರಮ ಹಾಗೂ ಇನ್ನಿತರ ಕೆಲಸಗಳಲ್ಲಿ ತೊಡಗದಂತೆ ವಿರಾಮಿಸುವುದಾಗಿದೆ. ಈ ಪರಿಸ್ಥಿತಿಯಲ್ಲಿ ಸೀಮಿತ ಆಹಾರ, ಪಥ್ಯ ಮತ್ತು ಇನ್ನಿತರ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಮಾನವಶಾಸ್ತ್ರಜ್ಞರಾದ ಮಲಿನೋವಸ್ಕಿಯವರು ಈ ತೆರನಾದ ವಹಿವಾಟು ಪತಿ-ಪತ್ನಿಯರ ನಡುವೆ ಅನ್ಯೋನ್ಯವಾದ ಸಂಬಂಧದ ಪರಿಮಾಣವಾಗಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ. ಇನ್ನು ಕೆಲವು ತತ್ವಚಿಂತಕರು ಈ ತರಹದ ವಹಿವಾಟು ಪತ್ನಿ ಹೊಂದಿರುವ ಅಸಮಾದಾನತೆಗೆ



Scanned with Ca

ಪತಿ ಪತ್ನಿಯಂತೆ ಅನುಸರಣೆಯಲ್ಲಿ ತೊಡಗಿರುವುದರಿಂದ ಪತ್ನಿಯ ಬಗ್ಗೆ ಪತಿಯು ತಾಳಿರುವ ಕಾಳಜಿಯನ್ನು ಸೂಚಿಸುವುದಾಗಿದೆ.

ಬಾಂಧವ್ಯದ ವಹಿವಾಟುಗಳು ಸಮಾಜದಲ್ಲಿ ನಿಖರವಾಗಿ, ವ್ಯಕ್ತಿ ವ್ಯಕ್ತಿಗಳಲ್ಲಿರುವ ಸಂಬಂಧ ಸ್ವರೂಪವನ್ನು ತಿಳಿಹೇಳುವ ಆಯಾಮಗಳಾಗಿವೆ. ಹತ್ತಿರದ ಸಂಬಂಧಿಗಳು ಆತಿಥ್ಯದ ಸಂಬಂಧಿಗಳು, ದೂರದ ಸಂಬಂಧಿಗಳು, ವಿಶೇಷ ಸಂಬಂಧಗಳು ವಿವಾಹದ ಮೂಲಕ ಹೊಸ ಸಂಬಂಧಗಳ ನಿರ್ಮಾಣದವರು, ಇತ್ಯಾದಿಯಾಗಿ ಅವರವರ ಪಾತ್ರ, ಅಂತಸ್ತು, ಮಾಡಬೇಕಾದ ಕೆಲಸ, ಸೂಚಿಸಬೇಕಾದ ಔದಾರ್ಯ, ಗಂಭೀರತೆ, ಹಸನ್ಮುಖಿ, ಮುಂತಾದವುಗಳನ್ನು ವಸ್ತುನಿಷ್ಠವಾಗಿ, ಸ್ಪಷ್ಟವಾಗಿ, ನಿಖರವಾಗಿ ಸಮಾಜೋ ಶೈಕ್ಷಣಿಕದಂತೆ ಪರಸ್ಪರವಾಗಿ ಕಾರ್ಯೋನ್ಮುಖರಾಗಲು ಸಾಮಾಜಿಕ ಜೀವನವನ್ನು ನಿರ್ವಹಿಸಲು, ನಿರ್ದೇಶಿಸಲು ಹಾಗೂ ನಿಯಂತ್ರಿಸಲು ಬಾಂಧವ್ಯ ವ್ಯವಸ್ಥೆ ಮಾರ್ಗದರ್ಶನಗಳನ್ನು ನೀಡುವ ಪರಿಕಲ್ಪನೆಯಾಗಿದೆ. ಇದು ಸಾಮಾಜಿಕ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದು ವ್ಯಕ್ತಿಗಳನ್ನು ಸಾಮಾಜಿಕರಣಗೊಳಿಸುವ ಹಾಗೂ ತಿದ್ದುವ ಮೂಲಕ ಸಾಮಾಜಿಕ ಜೀವನಕ್ಕೆ ಅಣಿಗೊಳಿಸುವಲ್ಲಿ ಇದರ ಪಾತ್ರ ತುಂಬಾ ಹಿರಿದಾದುದಾಗಿದೆ. ಬಂಧುತ್ವದ ನಿಯಮ, ನಿಷ್ಠೆ ಹಾಗೂ ಸಂಬಂಧಗಳ ಸ್ವರೂಪವನ್ನು ಯಾರು ಪ್ರಶ್ನಿಸುವಂತಿಲ್ಲ, ಬಂಧುತ್ವ ಜೀವನ ನೈತಿಕ ನೆಲೆಯ ಆದರ್ಶ ಚಿತ್ರಿಸುವಲ್ಲಿ ಬಿಂಬಿತವಾಗಿದೆ.

## C) ಗ್ರಾಮೀಣ ಸಮುದಾಯ
## (Rural Community)

ಭಾರತವು ಗ್ರಾಮಗಳ ದೇಶವಾಗಿದೆ. ಕೃಷಿ ಪ್ರಧಾನ ರಾಷ್ಟ್ರವಾಗಿದೆ. ಗ್ರಾಮಗಳ ಉದ್ಧಾರವಾಗದೇ ಭಾರತದ ಉದ್ದಾರ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಗ್ರಾಮಗಳ ಪುನರನಿರ್ಮಾಣವಾಗದಿದ್ದ ಭಾರತಕ್ಕೆ ಭವಿಷ್ಯವಿಲ್ಲ, ಏಕೆಂದರೆ ಗ್ರಾಮಗಳ ಸಮಸ್ಯೆಗಳು ಸಮಸ್ಯೆಗಳ ಆಗರವಾಗಿವೆ. ಬಡತನ, ನಿರುದ್ಯೋಗ, ಭಿಕ್ಷಾಟನೆ, ಅಜ್ಞಾನ, ಅನಕ್ಷರತೆ, ಅಂಧಕಾರ, ಮೂಢನಂಬಿಕೆಗಳು, ಜಾತಿ ಪದ್ಧತಿ, ಗ್ರಾಮೀಣ ಋಣಭಾರತ್ವ ಕೂಲಿಕಾರ್ಮಿಕರ ಶೋಷಣೆ, ಮದ್ಯಪಾನ, ಜೂಜಾಟ, ಆರೋಗ್ಯ ಮತ್ತು ನೈರ್ಮಲ್ಯದ ಸಮಸ್ಯೆ ಮುಂತಾದವುಗಳಾಗಿವೆ. ಈ ಸಮಸ್ಯೆಗಳನ್ನು ಬಗೆಹರಿಸದೆ ಗ್ರಾಮಗಳ ಉದ್ದಾರ ಸಾಧ್ಯವಿಲ್ಲ.

ಗ್ರಾಮಗಳಲ್ಲಿ 70ರಷ್ಟು ಜನ ವಾಸಮಾಡುತ್ತಾರೆ. ಜನಸಂಖ್ಯೆಗೆ ಅನುಗುಣವಾಗಿ ಗ್ರಾಮೀಣ ಜನತೆಗೆ ಅಧಿಕಾರ ಅವಶ್ಯವೆಂದು ಇರಾವತಿಯವರು ಅಭಿಪ್ರಾಯಪಟ್ಟಿದ್ದರು, ಅಂತೆಯೆ ಅವರು ಅಧಿಕಾರ ಕೇಂದ್ರಿಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದರು. ಅಧಿಕಾರವು ಕೆಲವೆ ಕೆಲವು ಜನರಲ್ಲಿ ವಿಕೇಂದ್ರಿಕೃತವಾಗುವದರಿಂದ ಹಿಂಸೆಗೆ ಅವಕಾಶವಾಗುತ್ತದೆ. ಎಲ್ಲ ಗ್ರಾಮಗಳು



Scanned with Ca

ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸ್ವಾಯುತ್ತ ಘಟಕವಾಗಬೇಕೆಂದು ಅವರು ಬಯಸಿದ್ದರು. ಪ್ರತಿಯೊಬ್ಬರು ತಮಗೆ ಬೇಕಾದ ಕನಿಷ್ಠತಮ ಜೀವನ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳುವ ಸಾಮರ್ಥ್ಯವನ್ನು ಪಡೆದುಕೊಳ್ಳಬೇಕು ಇತರರ ಮೇಲೆ ಅವಲಂಬಿತರಾಗದೆ ಸ್ವಯಂಪರಿಪೂರ್ಣ ಘಟಕಗಳಾಗಬೇಕು ಆ ನಿಟ್ಟಿನಲ್ಲಿ ಶ್ರಮಿಸಬೇಕು, ಏಕೆಂದರೆ ಗ್ರಾಮಗಳ ಪರಿಪೂರ್ಣ ಸ್ವಾವಲಂಬನೆ ಸುಲಭಸಾಧ್ಯವಲ್ಲದೆಂದು ಗಾಂಧೀಜಿಯವರು ಮನಗಂಡಿದ್ದರು. ಬಹುತೇಕ ಹಳ್ಳಿಗಳು ತಮ್ಮ ತಮ್ಮ ಬೇಡಿಕೆಗಳಿಗಾಗಿ ಬೇರೆ ಬೇರೆ ಹಳ್ಳಿಗಳನ್ನು ಅವಲಂಬಿಸಿರುವ ನೈಜಸ್ಥಿತಿಯನ್ನು ಅವರು ತಿಳಿದಿದ್ದರು.

ಪ್ರತಿಯೊಂದು ಗ್ರಾಮವು, ಆ ಗ್ರಾಮದ ಜನಸಂಖ್ಯೆಗೆ ತಗಲುವಷ್ಟು ದವಸಧಾನ್ಯಗಳನ್ನು ಆಯಾ ಗ್ರಾಮದಲ್ಲಿಯೇ ಬೆಳೆಯಬೇಕು. ದನಕರುಗಳಿಗೆ ಬೇಕಾದ ಮೇವು, ಹುಲ್ಲು, ಹಸಿಗಡ್ಡಿ, ಇತ್ಯಾದಿ ಪ್ರದೇಶವನ್ನು ಆಯಾ ಊರುಗಳಲ್ಲಿಯೇ ನಿರ್ಮಿಸಿಕೊಳ್ಳಬೇಕು. ಗ್ರಾಮೀಣ ಯುವಕರಿಗೆ ಮನೋರಂಜನೆಯ ಸಾಧನೆಗಳನ್ನು, ಮಕ್ಕಳಿಗೆ ಆಟದ ಮೈದಾನಗಳನ್ನು ಈಡೇರಿಸಿಕೊಳ್ಳಬೇಕು. ಗ್ರಾಮೀಣ ಜನರ ಆಶೋತ್ತರಗಳು ಈಡೇರಿದ ನಂತರ ಮಿಕ್ಕ ಜಮೀನು ಉಳಿದರೆ ಅಂತಹದರಲ್ಲಿ (cash crops) ಹಣಕಾಸಿನ ಬೆಳೆಗಳನ್ನು ಬೆಳೆಯಬೇಕು. ಲಾಭ ಮತ್ತು ಹೆಚ್ಚಿನ ಹಣಕ್ಕೋಸ್ಕರ ಮಾದಕ ಪದಾರ್ಥಗಳಾದ ತಂಬಾಕು ಮತ್ತು ಅಫೀಮುಗಳನ್ನು ಸುತಾರಾಂ ಬೆಳೆಯಬಾರದೆಂದು ಸ್ಪಷ್ಟ ನಿಲುವು ಅವರದಾಗಿತ್ತು.

ಅನಕ್ಷರತೆ ಸಮಸ್ಯೆಯನ್ನು ಮೂಲೋಚ್ಚಾಟನೆ ಮಾಡಲು ಅಕ್ಷರತೆಯನ್ನು ಕಲಿಸಿಕೊಡಲು ಕಡ್ಡಾಯವಾಗಿ ಪ್ರತಿಯೊಂದು ಹಳ್ಳಿಯಲ್ಲಿ ಶಾಲೆಯಿರಬೇಕು. ಗ್ರಾಮದ ಮಕ್ಕಳಿಗೆ ಮೂಲಭೂತ ಶಿಕ್ಷಣವನ್ನು ಕಡ್ಡಾಯಗೊಳಿಸಬೇಕು. ಕುಡಿಯುವ ನೀರಿನ ವ್ಯವಸ್ಥೆ ಚೆನ್ನಾಗಿ ನಿರ್ವಹಿಸಬೇಕು, ಕೆರೆ, ಹಳ್ಳ, ಭಾವಿಗಳನ್ನು ಸ್ವಚ್ಛವಾಗಿರಿಸಿಕೊಳ್ಳಬೇಕು. ಪರಸ್ಪರರು ಸಹಕಾರದಿಂದ ಬೆಳೆಯಬೇಕು. ಸಹಕಾರ ತತ್ವದ ಆಧಾರದ ಮೇಲೆ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು, ಅಹಿಂಸಾ ಮನೋಭಾವವಿರಬೇಕು. ಜಾತಿ ವ್ಯವಸ್ಥೆಯಲ್ಲಿ ಯಾವುದೇ ಸಮೂಹ ಅಸ್ಪೃಶ್ಯತೆಯನ್ನು ಆಚರಣೆ ಮಾಡದಂತೆ ವ್ಯವಹರಿಸಬೇಕು. ಸಹಕಾರ ಮನೋಭಾವದಿಂದ ಏಕತೆಯನ್ನು ಕಾಪಾಡಿಕೊಳ್ಳಬೇಕು.

ಗ್ರಾಮದಲ್ಲಿ ಕಾಯಿದೆ ಮಾಡುವ, ಅನುಶಾಸನಗೊಳಿಸುವ ಹಕ್ಕು ಗ್ರಾಮ ಪಂಚಾಯತಿಗೆ ಇರಬೇಕು, ಪಂಚಾಯತ ಸದಸ್ಯರಾಗಿ ಚುನಾಯಿತಗೊಳ್ಳುವವರು ಕನಿಷ್ಠತಮ ಅರ್ಹತೆಗಳನ್ನು ಹೊಂದಿರಬೇಕು. ಆಯಾ ಪಂಚಾಯತಿಗೆ ಆಯಾ ಗ್ರಾಮದ ಸರ್ವಾಂಗೀಣ ಅಭಿವೃದ್ಧಿ ಮತ್ತು ಹಿತರಕ್ಷಣೆಯನ್ನು ಕಾಪಾಡಲು ಅಗತ್ಯವಾದ ಎಲ್ಲ ಅಧಿಕಾರ ಇರಬೇಕು. ಗ್ರಾಮದ ನಿರ್ಣಯಗಳನ್ನು ಕೈಗೊಳ್ಳುವಾಗ ಸರಕಾರದ ಹಸ್ತಕ್ಷೇಪವಿಲ್ಲದೇ ಸ್ವಾಯುತ್ತತೆ ಹೊಂದಿ ಘಟಕವಾಗಿ ಉಳಿಯಬಹುದು. ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ಸರ್ಕಾರ ಮತ್ತು ಗ್ರಾಮಗಳ ನಡುವಿನ ಸಂಬಂಧವು ಕೇವಲ ಕಂದಾಯ ವಸೂಲಿಗೆ ಮಾತ್ರ ಸೀಮಿತವಾಗಿತ್ತು. ಹಾಗಾಗದೇ, ಸರಕಾರ ಮತ್ತು ಜನರ ನಡುವಿನ ಸಂಬಂಧ ಹಿತವಾಗಿರಬೇಕು, ಸುಮಧುರವಾಗಿರಬೇಕು ಮತ್ತು ಅನ್ಯೋನ್ಯವಾಗಿರಬೇಕು. ವಯಕ್ತಿಕ ಸ್ವಾತಂತ್ರ್ಯದ ತಳಹದಿ ಮೇಲೆ ಹಳ್ಳಿಯ ಜೀವನದಲ್ಲಿ



Scanned with Ca

ಪರಿಪೂರ್ಣ ಪ್ರಜಾಸತ್ತೆ ನೆಲಸಬೇಕು ಪ್ರತಿಯೊಬ್ಬ ಗ್ರಾಮಸ್ಥ ಆಯಾ ಗ್ರಾಮಕ್ಕೆ ಸಂಬಂಧಪಟ್ಟ ಆಡಳಿತ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಅಹಿಂಸಾ ತತ್ವ ಜವಾಬ್ದಾರಿಯುತವಾಗಿ ಪ್ರತಿಯೊಬ್ಬರು ಬದ್ಧರಾಗಬೇಕು. ಗ್ರಾಮ, ಸಮಾಜ, ದೇಶ ಮತ್ತು ವೈಯಕ್ತಿಕ ಗೌರವ ಹಾಗೂ ಗೌರವ ರಕ್ಷಣೆಗಾಗಿ ಸರ್ವರು ತಮ್ಮ ತನವನ್ನು ಸಮರ್ಪಿಸಿಕೊಳ್ಳಬೇಕು. ಗ್ರಾಮದ ಹಿತಸಾಧನಕ್ಕಾಗಿ ಎಂತಹ ತ್ಯಾಗಕ್ಕಾದರು ಸಿದ್ದರಿರಬೇಕು. ಇದು ಪ್ರತಿಯೊಬ್ಬ ಪ್ರಜೆಯ ಸ್ವಾಸ್ಥ ಗುರಿ ಮತ್ತು ಲಕ್ಷಣವಾಗಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಮೀಣ ಅಭಿವೃದ್ಧಿಯಾಗಬೇಕಾದರೆ ಪ್ರತಿಗ್ರಾಮಸ್ಥ ತನ್ನ ಗ್ರಾಮಕ್ಕಾಗಿ ಶ್ರದ್ಧೆ, ಕಳಕಳಿ ಹಾಗು ಅಭಿಮಾನದಿಂದ ಸೇವೆಗೈಯಬೇಕು. ಸ್ವಚ್ಛತೆಯ ಕೆಲಸಗಳಿಗೆ ಸಿದ್ದರಾಗಬೇಕು. ಇಂತಹವರಿಗೆ ಸಮಾಜದಲ್ಲಿ ಮಾನ್ಯತೆ ಸಿಗಬೇಕು. ಗ್ರಾಮೀಣ ಕುಶಲಕಲೆಗಳನ್ನು ಬೆಳೆಸಲು ತಂತ್ರಜ್ಞಾನ ಅಳವಡಿಸಿ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬೇಕು. ಹಳ್ಳಿಯಲ್ಲಿ ಕುಶಲಕರ್ಮಿಗಳ ಕೊರತೆಯಾಗಬಾರದು. ಅಭಿವೃದ್ಧಿಯನ್ನು ಕಂಡು ಬೇರೆ ಬೇರೆ ಗ್ರಾಮಗಳ ಜನರು ಆಸಕ್ತಿ ಅಭಿರುಚಿ ತೋರುವಂತೆ ಮಾಡಬೇಕು, ಗ್ರಾಮದಲ್ಲಿಯೇ ಕೌಶಲ್ಯ ಹಾಗೂ ಚಾಣಾಕ್ಷತನವನ್ನು ವರ್ದಿಸುವ ಕವಿಗಳು, ಕತೆಗಾರರು, ಶಿಲ್ಪಿಗಳು, ಚಿತ್ರಕಾರರು, ಪಂಡಿತರು, ಸಂಶೋಧಕರು, ಮುಂತಾದವರಿಗೆ ಗ್ರಾಮಗಳಲ್ಲಿ ಪ್ರೋತ್ಸಾಹ ಸಿಗುವಂತಾಗಬೇಕು.

ಇವುಗಳ ಮುಖಾಂತರ ಜನರಲ್ಲಿ ಮನೆ ಮಾಡಿದ್ದ ಮೌಢ್ಯತೆ ಹಾಗೂ ಅಜ್ಞಾನಕ್ಕೆ ಕಡಿವಾಣ ಹಾಕಿದಂತಾಗುತ್ತದೆ. ಜನರಿಗೆ ಶೋಷಣೆಯಾಗುವದು ತಪ್ಪುತ್ತದೆ. ಇವುಗಳ ಜೊತೆ ವಿವಿಧ ಕಾರ್ಯಕ್ರಮಗಳನ್ನು ಜೋಡಿಸಬೇಕು ಉದಾಹರಣೆಗೆ ಶಿಕ್ಷಣಕ್ಕೆ ಸಂಬಂಧಿಸಿದ ಶೈಕ್ಷಣಿಕ ಉಪನ್ಯಾಸಗಳಂತಹ ಕಾರ್ಯಕ್ರಮ, ರೋಗರುಜಿನಗಳಿಂದ ದೂರವಿರುವ, ಭವಿಷ್ಯತ್ತಿನ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗುವ ಆರೋಗ್ಯ ಕಾರ್ಯಕ್ರಮಗಳು ಇತ್ಯಾದಿ ಕಾರ್ಯಕ್ರಮಗಳನ್ನು ಜನರಿಗೆ ಪ್ರಚುರಪಡಿಸಲು ಮೇಲಿಂದ ಮೇಲೆ ಅನುಷ್ಠಾನಗೊಳಿಸಬೇಕು, ಶಿಕ್ಷಣದ ಮೂಲಕ ಕಲೆ, ಕಥನ, ಅಭಿವ್ಯಕ್ತಿ ಹೊರಸೂಸಬೇಕು. ಗ್ರಾಮೀಣ ಜನರು ಮಾಡುವ ವೃತ್ತಿಗಳಿಗೆ ತರಬೇತಿಯನ್ನು ನೀಡಿ, ಗುಣಾತ್ಮಕ ನಿಟ್ಟಿನಲ್ಲಿ ಹೊರಹೊಮ್ಮುವಂತೆ ನೀಡುವ ಶಿಕ್ಷಣ ಗ್ರಾಮೀಣ ಪುನರನಿರ್ಮಾಣಕ್ಕೆ ಪೂರಕವಾಗುವುದು.

ನಗರಗಳ ಆಕರ್ಷಣೆ ಕಡಿಮೆಯಾಗಬೇಕು. ಹಳ್ಳಿಯಿಂದ ದೂಡಲ್ಪಡುವದನ್ನು ನಿಲ್ಲಿಸಬೇಕು ಅಂದಾಗ ಮಾತ್ರ ನಗರೀಕರಣದ ಪ್ರಾಶಸ್ತ ಕ್ಷೀಣಿಸಿ ಗ್ರಾಮಗಳತ್ತ ಜನ ಹೊರಳುವ ರೀತಿಯಾಗಬೇಕು, ಇದರಿಂದಾಗಿ ಶೋಷಣೆ ರಹಿತವಾಗುತ್ತದೆ. ಸ್ವಯಂಪೂರ್ಣಕರಾಗಬೇಕು, ಗ್ರಾಮಗಳತ್ತ ಸೇವೆ ಸಲ್ಲಿಸಲು ಹೃದಯ ಮನಸ್ಕರಾಗಬೇಕು, ಗ್ರಾಮಸ್ಥರು ಸ್ವಾಭಿಮಾನ ಮತ್ತು ಆತ್ಮಗೌರವವನ್ನು ಹೆಚ್ಚಿಸಿಕೊಳ್ಳಬೇಕು. ಪರಾವಲಂಬಿಯಾಗಬಾರದು, ಸ್ವಾವಲಂಬಿಯಾಗಬೇಕು, ಚರಕ - ಖಾದಿ ಗ್ರಾಮೋದ್ಯೋಗವು ಗ್ರಾಮಗಳನ್ನು ಸ್ವಾವಲಂಬಿಯಾಗಿ ಪರಿವರ್ತಿಸಲು ಸಹಾಯಕವಾಗುತ್ತದೆ ಎಂಬ ಆಶಯ ತಳೆದಿದ್ದರು.

ಮಾದರಿ ಗ್ರಾಮಗಳ ಕಲ್ಪನೆ ಹೊತ್ತು ಮಾದರಿ (model) ಎನಿಸುವ ಹಳ್ಳಿಗಳು ಸ್ವಚ್ಛತೆಯಿಂದ ಕೂಡಿರಬೇಕು ಮನೆಯ ಸುತ್ತ ಮುತ್ತ ಶುದ್ಧ ಹವೆ, ಹಿತಕರವಾದ ವಾತಾವರಣ,



Scanned with Ca

ಸಾಕಷ್ಟು ಮನೆಯಲ್ಲಿ ಬೆಳಕು ಬರುವಂತಿರಬೇಕು. ಮನೆಯ ಆಸುಪಾಸಿನ ಭಾಗದಲ್ಲಿ ಕುಟುಂಬಕ್ಕೆ ತಗಲುವಷ್ಟು ಪಲ್ಯಕಾಯಿ ಬೆಳೆಯುವ ವ್ಯವಸ್ಥೆಯನ್ನು ಹೊಂದಿರಬೇಕು, ಹಳ್ಳಿಗಾಡಿನ ರಸ್ತೆಗಳು, ಗಲ್ಲಿಗಳು, ಓಣಿಗಳು, ಸ್ವಚ್ಛತೆಯಿಂದ ಕೂಡಿರಬೇಕು, ದೂಳುರಹಿತವಾಗಿರಬೇಕು. ಆರೋಗ್ಯಕರ ಪರಿಸರ ನಿರ್ಮಾಣವಾಗುವಂತಿರಬೇಕು. ಅನಾರೋಗ್ಯಕ್ಕೆ ಅಣಿಗೊಳಿಸುವಂತೆ ಇರಬಾರದು. ಗ್ರಾಮದ ಯೋಜನೆ ಮತ್ತು ಗಾತ್ರಕ್ಕನುಗುಣವಾಗಿ ಕುಡಿಯುವ ನೀರಿನ ವ್ಯವಸ್ಥೆಯಿರಬೇಕು. ಹಳ್ಳಿಗಳಲ್ಲಿನ ಭಾವಿಗಳು ಎಲ್ಲ ಜನರಿಗೆ (ಜಾತಿ ಬೇಧ ಬಾವವಿಲ್ಲದೆ) ಮುಕ್ತವಾಗಿರಬೇಕು. ಮನಸ್ಸಿನ ನೆಮ್ಮದಿಗೆ ಗ್ರಾಮದಲ್ಲಿ ದೇವಸ್ಥಾನ, ಧರ್ಮಶಾಲೆ ಭಜನೆ ಹಾಗೂ ಆಧ್ಯಾತ್ಮಿಕ ಕೇಂದ್ರಗಳ ತಾಣಗಳಿರಬೇಕು. ಇಡೀ ಗ್ರಾಮದ ದನಕರುಗಳಿಗೆ ಸಾರ್ವಜನಿಕ ಹುಲ್ಲುಗಾವಲುಗಳಿರಬೇಕು. ಸಾರ್ವಜನಿಕ ಹಾಲು ವಿತರಣಾ ಕೇಂದ್ರವಿರಬೇಕು.

ಗ್ರಾಮದ ಜನರ ಮಧ್ಯೆ ಉದ್ಭವಿಸುವ ಸಂಘರ್ಷಕ್ಕೆ ಕಡಿವಾಣ ಹಾಕಲು, ಜಗಳಗಳನ್ನು ಬಗೆಹರಿಸಲು ಪಂಚಾಯತಿ ಇರಬೇಕು. ಪಂಚಾಯತ ಗ್ರಾಮಸ್ಥರಿಗೆ ಒದಗಿಸಲು ಹಣ್ಣು, ಹಾಲು, ದವಸಧಾನ್ಯ, ತರಕಾರಿ, ಖಾದಿಬಟ್ಟೆ ಇತ್ಯಾದಿಗಳನ್ನು ಉತ್ಪಾದಿಸುವ ಅವಕಾಶವಿರಬೇಕು. ಹೀಗೆ ಪ್ರತಿ ಗ್ರಾಮ ಪರಿಪೂರ್ಣತೆಯಿಂದ ಕೂಡಿರಬೇಕು. ಆರ್ಥಿಕವಾಗಿ ಸ್ವಾವಲಂಬಿಯಾಗಬೇಕು. ಒಂದು ವೇಳೆ ಆರ್ಥಿಕ ಸ್ವಾವಲಂಬನೆ ಪಡೆಯದೆ ಇದ್ದರೆ ರಾಜಕೀಯ ಸ್ವಾತಂತ್ರ ದಕ್ಕದು.

ಹಳ್ಳಿಗಳ ಬೆಳವಣಿಗೆಯಾಗಬೇಕಾದರೆ, ಸಾಕ್ಷರರು ಹಳ್ಳಿಗಳಲ್ಲೆ ನೆಲಸಬೇಕು, ಹಳ್ಳಿಗಳ ಸೇವೆಯನ್ನು ಪೂರೈಸಲು ಕಂಕಣಬದ್ದರಾಗಿ ನಿಲ್ಲಬೇಕು. ಯುವ ತರುಣ ವಿದ್ಯಾವಂತ ಪೀಳಿಗೆ ನಗರಗಳತ್ತ ಚಾಚಿದರೆ, ಹಳ್ಳಿಗಳು ಪ್ರಗತಿಕಾಣಲು ಅಸಾಧ್ಯ, ಆದ ಕಾರಣ ವಿದ್ಯಾವಂತ ತರುಣರು ದೇಶ ಸೇವೆಯ ಕಾರ್ಯದಲ್ಲಿ ಸನ್ನದ್ದರಾಗಲು, ತ್ಯಾಗಿಗಳಾಗಿ ತನುಮನಧನಗಳಿಂದ, ಸೇವಾ ಮನೋಭಾವನೆಯಿಂದ ಮುಂದೆ ಬಂದರೆ, ಗ್ರಾಮೀಣ ಪುನರರಚನೆಯ ನಿರ್ಮಾಣ ಸಾಧ್ಯ ಎಂದು ಗಾಂಧೀಜಿಯವರು ಕರೆನೀಡಿದರು.

ಗ್ರಾಮಗಳಲ್ಲಿನ ಗುಡಿಕೈಗಾರಿಕೆಗಳನ್ನು ಬೆಳೆಸಬೇಕು, ಗೃಹ ಉಪಯೋಗಿ ವಸ್ತುಗಳನ್ನು ಪುರಸ್ಕರಿಸಬೇಕು. ಗ್ರಾಮದ ಪರಿಸರವನ್ನು ಶುಚಿಗೊಳಿಸಬೇಕು, ಆರೋಗ್ಯದ ಸವಲತ್ತುಗಳನ್ನು ಒದಗಿಸಿಕೊಡಬೇಕು. ಹಳ್ಳಿಗರಿಗೆ ಸ್ವಚ್ಛತೆಯ ಅರಿವನ್ನು ಮೂಡಿಸಬೇಕು. ಗ್ರಾಮೀಣ ಮಕ್ಕಳಿಗೆ ಶಿಕ್ಷಣ ಪಡೆಯುವಂತೆ ಪುರಸ್ಕರಿಸಿ, ಪ್ರೋತ್ಸಾಹಿಸಬೇಕು. ಅಂದಾಗ ಮಾತ್ರ ಭಾರತದ ಹಳ್ಳಿಗಳ ಉದ್ದಾರ ಸಾಧ್ಯ ಎನ್ನುವ ಅಭಿಮತವಾಗಿತ್ತು.

ಭಾರತವು ಹಳ್ಳಿಗಳಲ್ಲಿದೆ ಹೊರತು ನಗರಗಳಲಿಲ್ಲ, ನಗರದ ನಿರ್ಮಾಣ ಹಾಗೂ ನಗರಸ್ಥರ ಅವಶ್ಯಕತೆಗಳಿಗೆ ಹಳ್ಳಿಗರನ್ನು ಆಶ್ರಯಿಸಬೇಕಾಗಿಲ್ಲ. ಅನಾದಿಕಾಲದಿಂದಲೂ ಭಾರತವು ಹಳ್ಳಿಗಾಡಿನ ಸಂಸ್ಕೃತಿಯನ್ನು ಹೊಂದಿದೆ. ಅಂತೆಯೇ ಗಾಂಧೀಜಿಯವರು 'ಹಳ್ಳಿಯ ಉದ್ದಾರವೇ ದೇಶದ ಉದ್ಧಾರ'', 'ಹಳ್ಳಿಯ ಪ್ರಗತಿಯೇ ದೇಶದ ಪ್ರಗತಿ', 'ಹಳ್ಳಿಯ ನಿರ್ಮಾಣವೆ ದೇಶದ ಪುನರನಿರ್ಮಾಣ' ಎಂದು ಹಳ್ಳಿಯ ಪುನರನಿರ್ಮಾಣವೆ ರಾಷ್ಟ್ರಶಕ್ತಿ ಎಂಬುದಾಗಿ ಪ್ರತಿಪಾದಿಸಿದ್ದಾರೆ.



Scanned with Ca